REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 33 | ಸಂಚಿಕೆ : 27 | 7 ಅಕ್ಟೋಬರ್ 2026 | ಬುಧವಾರ | ಪುಟಗಳು : 8 | ಬೆಲೆ : 2/–

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಎಚ್.ಕೆ. ಪಾಟೀಲರ ಸಲಹೆ ಪಟ್ಟಣ ಸಹಕಾರಿ ಬ್ಯಾಂಕುಗಳನ್ನು ಬಲಪಡಿಸಿ

ಹುಬ್ಬಳ್ಳಿ : ರಾಷ್ಟ್ರೀಯ ಪಟ್ಟಣ ಸಹಕಾರಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ (ಎನ್‌ಯುಸಿಎಫ್‌ಡಿಸಿ)ದ ವೇದಿಕೆಯಡಿ ಪಟ್ಟಣ ಸಹಕಾರಿ ಬ್ಯಾಂಕ್‌ಗಳು ಸೇರ್ಪಡೆಗೊಂಡಲ್ಲಿ ಪಟ್ಟಣ ಸಹಕಾರ ಬ್ಯಾಂಕ್‌ಗಳು ಇನ್ನಷ್ಟು ಸಬಲರಾಗಲು ಅವಕಾಶಗಳಿವೆ ಎಂದು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಎಚ್.ಕೆ. ಪಾಟೀಲರವರು ಹೇಳಿದರು.

ನಗರದಲ್ಲಿ ರಾಷ್ಟ್ರೀಯ ಪಟ್ಟಣ ಸಹಕಾರಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ (ಎನ್‌ಯುಸಿಎಫ್‌ಡಿಸಿ) ಮತ್ತು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಹಾಗೂ ಹುಬ್ಬಳ್ಳಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ನೇತೃತ್ವದಲ್ಲಿ ದಿನಾಂಕ : 29.09.2026ರಂದು ಆಯೋಜಿಸಿದ್ದ

3ನೇ ಪುಟಕ್ಕೆ...

ಸಹಕಾರ ಶಿಕ್ಷಣದ ಕುರಿತು ಕೆ.ಎಚ್. ಪಾಟೀಲ ಕಾನೂನು ಕಾಲೇಜಿನಲ್ಲಿ ವಿಶೇಷ ವಿಚಾರ ಸಂಕಿರಣ

ಬೆಂಗಳೂರು : ಬೆಂಗಳೂರಿನ ಪ್ರತಿಷ್ಠಿತ ಕೆ.ಎಚ್. ಪಾಟೀಲ ಕಾನೂನು ಕಾಲೇಜು ಹಾಗೂ ಗುಜರಾತನ ಆನಂದ್‌ನಲ್ಲಿರುವ "ತ್ರಿಭುವನ್" ಸಹಕಾರಿ ವಿಶ್ವ ವಿದ್ಯಾಲಯ (TSU)ದ ಸಹಯೋಗದೊಂದಿಗೆ ದಿನಾಂಕ : 03.10.2026 ರಂದು "ರಿಫಾರ್ಮ್ ಉತ್ಸವ್" ಅಡಿಯಲ್ಲಿ ವಿಶೇಷ ವಿಚಾರ ಸಂಕಿರಣವನ್ನು ಆಯೋಜಿಸಿತ್ತು.

ಈ ವಿಚಾರ ಸಂಕಿರಣವು ಭಾರತದಲ್ಲಿ ಸಹಕಾರ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಯ

3ನೇ ಪುಟಕ್ಕೆ...

4 ಪ್ರಿಯದರ್ಶಿನಿ ಮಹಿಳಾ ಅರ್ಬನ್ ಸಹಕಾರಿ ಬ್ಯಾಂಕ್ : 29ನೇ ಸರ್ವ ಸದಸ್ಯರ ಮಹಾಸಭೆ

6 ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ : 45ನೇ ಸರ್ವಸದಸ್ಯರ ಮಹಾಸಭೆ

7 ನಿಮ್ಮ ಪ್ರಶ್ನೆ ನಮ್ಮ ಉತ್ತರ

ಸಂಪಾದಕೀಯ

ಆತ್ಮೀಯ ಸಹಕಾರಿಗಳೇ...

ವಹಿವಾಟು ಶುಲ್ಕ ಗ್ರಾಹಕರ ಮೇಲೆ ವರ್ಗಾಯಿಸದಂತೆ ನಿರಂತರ ಕಣ್ಗಾವಲು ವ್ಯವಸ್ಥೆಯನ್ನು ರೂಪಿಸಬೇಕಾಗಿದೆ

ಸರಿಯಾಗಿ ಹತ್ತು ವರ್ಷಗಳ ಹಿಂದೆ, ನಮ್ಮ ದೇಶದಲ್ಲಿ ಯುಪಿಐ ಎನ್ನುವ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ಬಂದಿತು ಹಾಗೂ ದಿನನಿತ್ಯದ ವ್ಯವಹಾರವನ್ನು ಸುಗಮಗೊಳಿಸಿತು. ಆದರೆ, ಈವರೆಗೆ ಸಂಪೂರ್ಣ ಉಚಿತವಾಗಿದ್ದ ವ್ಯವಸ್ಥೆಯಲ್ಲಿ ಬದಲಾವಣೆ ತಂದಿರುವ ಕೇಂದ್ರ ಸರ್ಕಾರ, ರೂ.2 ಸಾವಿರಕ್ಕಿಂತ ಹೆಚ್ಚಿನ ಪಾವತಿಗಳ ಮೇಲೆ ವ್ಯಾಪಾರಿಗಳಿಗೆ ಶೇ.0.4ರಷ್ಟು ವ್ಯಾಪಾರಿ ರಿಯಾಯಿತಿ ದರ ವಿಧಿಸಲು ನಿರ್ಧರಿಸಿದೆ.

ಗಮನಿಸಿ, ಜಾರಿಯಾದ ಆರಂಭದಲ್ಲಿ ವಾರ್ಷಿಕ 1.78 ಕೋಟಿ ವಹಿವಾಟುಗಳನ್ನು ದಾಖಲಿಸಿದ್ದ ಯುಪಿಐ ಇಂದು 24,162 ಕೋಟಿಗೂ ಅಧಿಕ ವಹಿವಾಟುಗಳಿಗೆ ಏರಿಕೆಯಾಗಿದ್ದು, ಪ್ರಸ್ತುತ ದಿನಕ್ಕೆ 66 ಕೋಟಿ ವಹಿವಾಟುಗಳು ನಡೆಯುತ್ತವೆ ಅಂದರೆ, ಯುಪಿಐ ಮೇಲಿನ ನಮ್ಮ ಜನರ ಅವಲಂಬನೆಯ ಪ್ರಮಾಣವನ್ನು ಊಹಿಸಬಹುದಾಗಿದೆ. ಯುಪಿಐ ಮೂಲಕ ನಡೆಯುವ ವಹಿವಾಟಿನ ಮೌಲ್ಯವೂ ಅಷ್ಟೇ ವೇಗವಾಗಿ ಬೆಳೆದಿದೆ. ಆರಂಭದಲ್ಲಿ ರೂ. 0.07 ಲಕ್ಷ ಕೋಟಿ ಮೌಲ್ಯದ ವಹಿವಾಟುಗಳು ದಾಖಲಾಗಿದ್ದರೆ, ಇಂದು ಸುಮಾರು ರೂ. 314 ಲಕ್ಷ ಕೋಟಿಗಳಿಗೆ ತಲುಪಿದೆ. ಅಂದರೆ, ಇದರ ಅಗಾಧತೆಯನ್ನು ಊಹಿಸಬಹುದಾಗಿದೆ.

ಹೀಗೆ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಯುಪಿಐ ಮಹತ್ವದ ಯಶೋಗಾಥೆಯಾಗಿದ್ದು, ಪಾವತಿ ವ್ಯವಸ್ಥೆಯಲ್ಲಿ ಕ್ರಾಂತಿಯನ್ನೇ ಉಂಟುಮಾಡಿದೆ. ಇಂದು ಯುಪಿಐ ವಹಿವಾಟುಗಳು ನಗರ ಪ್ರದೇಶಗಳು ಮಾತ್ರವಲ್ಲದೆ, ಗ್ರಾಮೀಣ ಪ್ರದೇಶಗಳನ್ನೂ, ಸಮಾಜದ ಅತ್ಯಂತ ದುರ್ಬಲ ವರ್ಗಗಳನ್ನೂ ತಲುಪಿದೆ. ಈ ರೀತಿಯಾಗಿ ಬೃಹತ್ ಪ್ರಮಾಣದ ಪಾವತಿ ವ್ಯವಸ್ಥೆಯನ್ನು ಉಚಿತವಾಗಿ ಮುಂದುವರಿಸುವುದು ಸಾಧ್ಯವಿಲ್ಲ ಎನ್ನುವ ಕಾರಣವನ್ನು ನೀಡಿ, ಯುಪಿಐ ವಹಿವಾಟುಗಳಿಗೆ ಶುಲ್ಕ ವಿಧಿಸುವುದಕ್ಕೆ ಸಮರ್ಥನೆಯನ್ನಾಗಿ ನೀಡಲಾಗುತ್ತಿದೆ.

ನಿಜ, ಪ್ರಸ್ತುತ ವಿಧಿಸಲಾಗಿರುವ ವ್ಯಾಪಾರಿ ರಿಯಾಯಿತಿ ದರ ಗ್ರಾಹಕರಿಗೆ ಅನ್ವಯಿಸುವುದಿಲ್ಲ ಎಂದೇ ಹೇಳಲಾಗಿದೆ. ಹಾಗೂ ಡೆಬಿಟ್ ಕಾರ್ಡ್ ಅಥವಾ ಯುಪಿಐ ರೀತಿಯ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಹಣ ಪಾವತಿಸುವ ಅಥವಾ ಪಡೆಯುವ ವ್ಯಕ್ತಿಗಳ ಮೇಲೆ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಯಾವುದೇ ಶುಲ್ಕ ವಿಧಿಸದಂತೆ ಬ್ಯಾಂಕುಗಳಿಗೆ ಹಾಗೂ ಇತರ ಸಂಸ್ಥೆಗಳಿಗೆ ನಿರ್ಬಂಧವನ್ನೂ ವಿಧಿಸಲಾಗಿದೆ.

ಆದರೆ, ವ್ಯವಹಾರ ನಡೆಸುವವರು ತಮ್ಮ ಲಾಭದಲ್ಲಿ ಯಾವುದೇ ಒಂದು ಸಣ್ಣ ವೆಚ್ಚವನ್ನು ಭರಿಸಲು ಸಿದ್ಧವಿರುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. 'ವ್ಯಾಪಾರಂ ದ್ರೋಹ ಚಿಂತನಂ' ಅಂದರೆ ವ್ಯಾಪಾರ ಅಥವಾ ವ್ಯವಹಾರದಲ್ಲಿ ವಂಚನೆ ಅಥವಾ ಸ್ವಾರ್ಥ ಚಿಂತನೆ ಇರುತ್ತದೆ ಎನ್ನುವ ಜನಪ್ರಿಯ ನಾಣ್ಣುಡಿಯೇ ಇದೆ. ಹೀಗಿರುವಾಗ ಮುಂದಿನ ದಿನಗಳಲ್ಲಿ ಅವರುಗಳು ಬೇರೊಂದು ರೂಪದಲ್ಲಿ ಈ ವೆಚ್ಚವನ್ನು ಗ್ರಾಹಕರ ಮೇಲೆ ವರ್ಗಾಯಿಸುವ ಸಾಧ್ಯತೆಯನ್ನು ತಳ್ಳಿಹಾಕಲು ಬರುವುದಿಲ್ಲ.

ಆದ್ದರಿಂದ ಕೇಂದ್ರ ಸರ್ಕಾರ ಈ ಶುಲ್ಕ ಅಥವಾ ಯಾವುದೇ ಗುಪ್ತ ಶುಲ್ಕವನ್ನು ಗ್ರಾಹಕರ ಮೇಲೆ ಹೇರಲಾಗುತ್ತಿದೆಯೇ ಎನ್ನುವ ಬಗ್ಗೆ ನಿರಂತರ ಕಣ್ಗಾವಲು ವ್ಯವಸ್ಥೆಯನ್ನು ರೂಪಿಸಬೇಕಾಗಿದೆ. ಇದು ವಿಫಲವಾದಲ್ಲಿ, ಜನ ಮತ್ತೆ ಹಿಂದಿನ ನಗದು ವ್ಯವಹಾರಗಳಿಗೆ ಮರಳುವ ಸಾಧ್ಯತೆ ಇದೆ ಎಂದು ಎಚ್ಚರಿಸ ಬಯಸುತ್ತೇನೆ.

▶▶ ಎಚ್.ಕೆ. ಪಾಟೀಲ

ಬ್ಯಾಂಕಿಂಗ್ ನ್ಯೂಸ್

ದಿನಾಂಕ:24-10-2026 ರಂದು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು /ಉಪಾಧ್ಯಕ್ಷರು/ ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ಹಾಗೂ ಮಾಹಿತಿ ತಂತ್ರಜ್ಞಾನ ಅಧಿಕಾರಿಗಳಿಗೆ ಮಾಹಿತಿ ತಂತ್ರಜ್ಞಾನ ವಿಷಯವಾಗಿ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ -ಬೆಂಗಳೂರು

ಬೆಂಗಳೂರು : ಆಧುನಿಕ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೊಸ ಹೊಸ ತಂತ್ರಜ್ಞಾನಗಳು ದಿನನಿತ್ಯ ಹೊರಬರುತ್ತಿದ್ದು, ಅದಕ್ಕೆ ಅನುಗುಣವಾಗಿ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಅವುಗಳನ್ನು ಅಳವಡಿಸಿಕೊಂಡು ತಮ್ಮ ಗ್ರಾಹಕರಿಗೆ ಉತ್ತಮ ಸೇವೆ ನೀಡಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ : 24.10.2026ರಂದು CREST Infomedia ಸಂಸ್ಥೆಯೊಂದಿಗೆ ಮಹಾಮಂಡಳವು ಬೆಂಗಳೂರಿನ "Hotel Fairfield by Marriott" 59th C Cross, 4th M Block, Manjunath Nagar, Rajajinagar, Bengaluru – 560010 ಇಲ್ಲಿ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿರುತ್ತದೆ.

ಸದರಿ ವಿಚಾರ ಸಂಕಿರಣದಲ್ಲಿ ಆಧುನಿಕ ಬ್ಯಾಂಕಿಂಗ್ ವಿಷಯಗಳ ಕುರಿತು ಉಪನ್ಯಾಸ ನೀಡಿ, ಚರ್ಚಿಸಲಾಗುವುದು. ಈ ಸದರಿ ವಿಚಾರ ಸಂಕಿರಣದಲ್ಲಿ ಅಧ್ಯಕ್ಷರು / ಉಪಾಧ್ಯಕ್ಷರು / ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ಹಾಗೂ ಮಾಹಿತಿ ತಂತ್ರಜ್ಞಾನ ಅಧಿಕಾರಿಗಳಿಗೆ (I.T. Head) ಸೇರಿ ಒಂದು ಬ್ಯಾಂಕಿನಿಂದ ಗರಿಷ್ಠ ನಾಲ್ಕು ಪ್ರತಿನಿಧಿಗಳು ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

ಈ ವಿಚಾರ ಸಂಕಿರಣವನ್ನು ದಿನಾಂಕ : 24.10.2026ರಂದು ಬೆಳಿಗ್ಗೆ 08.30 ಗಂಟೆಗೆ ಉಪಹಾರ ಮತ್ತು ನೋಂದಣಿಯೊಂದಿಗೆ ಪ್ರಾರಂಭಿಸಲಾಗುವುದು. ಈ ವಿಚಾರ ಸಂಕಿರಣದಲ್ಲಿ ಭಾಗವಹಿಸುವ ಪ್ರತಿನಿಧಿಗಳು ದಿನಾಂಕ : 17.10.2026 ರೊಳಗಾಗಿ ಕಡ್ಡಾಯವಾಗಿ ಪ್ರತಿನಿಧಿಗಳ ಹೆಸರುಗಳನ್ನು ಮಹಾಮಂಡಳದ ಇ-ಮೇಲ್ ವಿಳಾಸ : kscubfed@gmail.comಗೆ ತಪ್ಪದೇ ಕಳುಹಿಸಿಕೊಡಬೇಕಾಗಿ ಕೋರಲಾಗಿದೆ. ನೇರವಾಗಿ ಬಂದ ಪ್ರತಿನಿಧಿಗಳಿಗೆ ಪ್ರವೇಶ ಇರುವುದಿಲ್ಲ. ಈ ವಿಚಾರ ಸಂಕಿರಣದಲ್ಲಿ ತಪ್ಪದೇ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ವಿನಂತಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಉಪ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ (7411332655) ಮತ್ತು ಶ್ರೀ ಹೆಚ್.ಸಿ. ಶ್ರೀನಿವಾಸ್ (9945566068) ಇವರುಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಯವರು ತಿಳಿಸಿದ್ದಾರೆ.

...1ನೇ ಪುಟದಿಂದ

ನಾಯಕತ್ವ ಸಮಾವೇಶ ಹಾಗೂ ವಿವಿಧ ವಿಷಯಗಳ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ರಾಜ್ಯದಲ್ಲಿ ಇಂದು 248 ಪಟ್ಟಣ ಸಹಕಾರ ಬ್ಯಾಂಕುಗಳಿದ್ದು, ಒಟ್ಟು 1146 ಶಾಖೆಗಳೊಂದಿಗೆ ವಿಸ್ತಾರವಾಗಿ ಸೇವೆ ನೀಡುತ್ತಿವೆ. ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಬರೋಬ್ಬರಿ 23,72,653 ಸದಸ್ಯರಿದ್ದಾರೆ. ಇದು ನಮ್ಮ ಆರ್ಥಿಕ ಶಕ್ತಿಯ ಹೆಮ್ಮೆಯ ಸಂಕೇತವಾಗಿದೆ. ಇವುಗಳ ಹಿಂದೆ 8314 ನಿಷ್ಠಾವಂತ ಉದ್ಯೋಗಿಗಳು ಹಗಲಿರುಳು ಶ್ರಮಿಸುತ್ತಿದ್ದಾರೆ. ನಮ್ಮ ಬ್ಯಾಂಕುಗಳು ಒಟ್ಟು ರೂ. 64,338 ಸಾವಿರ ಕೋಟಿ ದುಡಿಯುವ ಬಂಡವಾಳವನ್ನು ಹೊಂದಿದ್ದು, ಪ್ರಸ್ತುತ ಸಾಲಿನಲ್ಲಿ ರೂ.592 ಕೋಟಿ ನಿವ್ವಳ ಲಾಭಗಳಿಸಿ ಅಭೂತಪೂರ್ವ ಪ್ರಗತಿ ಸಾಧಿಸಿವೆ. ನಾವು ಮುಂದಿನ ದಿನಗಳಲ್ಲೂ ಇದೇ ರೀತಿಯ ಯಶಸ್ವಿನ ಹಾದಿಯಲ್ಲಿ ಸಾಗಬೇಕಿದೆ. ಇಂದು ನಾವು ಅತ್ಯಂತ ಸ್ಪರ್ಧಾತ್ಮಕ ಯುಗದಲ್ಲಿದ್ದೇವೆ. ಪ್ರತಿದಿನವೂ ತಂತ್ರಜ್ಞಾನದಲ್ಲಿ ನೂತನ ಆವಿಷ್ಕಾರಗಳು ಕಂಡುಬರುತ್ತಿವೆ. ಕಾಲದ ಯುಗಧರ್ಮಕ್ಕೆ ಅನುಗುಣವಾಗಿ ನಾವು ಮಾಹಿತಿ ತಂತ್ರಜ್ಞಾನವನ್ನು (Information Technology) ಅರಿತು ನಮ್ಮ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕಾಗಿದೆ. ದೇಶದ ಯಾವುದೋ ಮೂಲೆಯಲ್ಲಿರುವ ಶಾಖಾ ಕಚೇರಿಯ ದಿನನಿತ್ಯದ ವಹಿವಾಟನ್ನು ಮುಖ್ಯ ಕಚೇರಿಯ ಕಂಪ್ಯೂಟರ್‌ನಲ್ಲಿ ಕ್ಷಣಾರ್ಧದಲ್ಲಿ ನೋಡಿ ತಿಳಿದುಕೊಳ್ಳುವ ಆಧುನಿಕ ವ್ಯವಸ್ಥೆ ಇಂದು ನಮ್ಮ ಮುಂದಿದೆ. ಡಿಜಿಟಲ್ ವ್ಯವಸ್ಥೆಯ ಮೂಲಕ ಸಾಲ ನೀಡುವುದು, ಪಾವತಿ ಸ್ವೀಕರಿಸುವುದು ಮತ್ತು ಠೇವಣಿ ಇಡುವುದು–ಇವೆಲ್ಲವೂ ಇಂದಿನ ಬ್ಯಾಂಕಿಂಗ್ ವ್ಯವಸ್ಥೆಯ ಅನಿವಾರ್ಯ ಭಾಗಗಳಾಗಿವೆ.

ಈ ನಿಟ್ಟಿನಲ್ಲಿ ರಾಷ್ಟ್ರಮಟ್ಟದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಪ್ರತ್ಯೇಕವಾಗಿ ಒಂದು ಅಂಬ್ರೆಲಾ ಆರ್ಗನೈಜೇಷನ್ ಆಗಿ ರಾಷ್ಟ್ರೀಯ ಪಟ್ಟಣ ಸಹಕಾರ ಹಣಕಾಸು ಮತ್ತು ಅಭಿವೃದ್ಧಿ ನಿಗಮ (NUCFDC) ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯು ಮುಂಬೈನಲ್ಲಿ ತನ್ನ ಮುಖ್ಯ ಕಚೇರಿಯನ್ನು ಹೊಂದಿದ್ದು, ಈಗಾಗಲೇ ದೇಶಾದ್ಯಂತ ಸುಮಾರು ರೂ.321.79 ಕೋಟಿಗೂ ಅಧಿಕ ಇಕ್ವಿಟಿ ಷೇರನ್ನು ಸಂಗ್ರಹಿಸಿ ತನ್ನ ಕಾರ್ಯಚಟುವಟಿಕೆಗಳನ್ನು ಅತ್ಯಂತ ಯಶಸ್ವಿಯಾಗಿ ಪ್ರಾರಂಭಿಸಿದೆ. ನಮ್ಮ ರಾಜ್ಯದ 50 ಪಟ್ಟಣ ಸಹಕಾರ ಬ್ಯಾಂಕುಗಳು NUCFDCಯ ಸದಸ್ಯತ್ವವನ್ನು ಪಡೆದುಕೊಂಡು ರೂ.17.25 ಕೋಟಿ ಷೇರುಗಳನ್ನು ಖರೀದಿಸಿರುತ್ತವೆ.

ಈ ಹಿಂದೆ ಬ್ಯಾಂಕುಗಳು ತಮ್ಮ ಠೇವಣಿ ಮೊತ್ತದ ಶೇ.0.15 ರಷ್ಟು ಹಣ ನೀಡಿ ಷೇರು ಖರೀದಿಸಬೇಕಾಗಿತ್ತು. ಆದರೆ ಈಗ ಸಣ್ಣ ಬ್ಯಾಂಕುಗಳಿಗೂ ಅನುಕೂಲವಾಗುವಂತೆ NUCFDC ಹೊಸ ಸುತ್ತೋಲೆ ಹೊರಡಿಸಿದೆ. ಇದರ ಪ್ರಕಾರ ಕೇವಲ ರೂ.1000 ಪಾವತಿಸಿ ಸಂಸ್ಥೆಯ ಷೇರುದಾರರಾಗಲು ಅವಕಾಶ ನೀಡಲಾಗಿದೆ. ಪ್ರಯುಕ್ತ, ನಮ್ಮ ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳು ತಕ್ಷಣವೇ ಈ ಸಂಸ್ಥೆಯ ಷೇರುದಾರರಾಗಿ ಮತ್ತು ಆ ಮೂಲಕ NUCFDC ಒದಗಿಸುವ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಎಲ್ಲ ಸೌಲಭ್ಯಗಳನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು. ಮುಂದಿನ ದಿನಗಳಲ್ಲಿ ಇದು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಆಶ್ರಯ ಕಲ್ಪಿಸುವ ಬೃಹತ್ ಸಂಸ್ಥೆಯಾಗಿ ಹೊರಹೊಮ್ಮಲಿದೆ ಎಂಬ ನಂಬಿಕೆ ನನಗಿದೆ. ಪ್ರಯುಕ್ತ, ಈ ಅಂಬ್ರೆಲಾ ಸಂಸ್ಥೆಯ ಸದಸ್ಯತ್ವವನ್ನು ನಮ್ಮ ಎಲ್ಲ ಪಟ್ಟಣ ಸಹಕಾರ ಬ್ಯಾಂಕುಗಳು ಪಡೆದುಕೊಂಡಲ್ಲಿ ಖಂಡಿತವಾಗಿಯೂ ನಮ್ಮ ಬೆಳವಣಿಗೆಗೆ ದೊಡ್ಡ ಸಹಕಾರಿಯಾಗಲಿದೆ ಎಂದರು.

ಹುಬ್ಬಳ್ಳಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಕ್ರಮ ಆರ್. ಸಿರೂರ ಪ್ರಾಸ್ತಾವಿಕ ಮಾತನಾಡಿ, ಪಟ್ಟಣ ಸಹಕಾರ ಬ್ಯಾಂಕ್‌ಗಳ ಸವಾಲು ಮತ್ತು ಸಮಸ್ಯೆಗಳನ್ನು ಎದುರಿಸಲು ನೆರವಾಗುವುದಕ್ಕಾಗಿ ಎನ್‌ಯುಸಿಎಫ್‌ಡಿಸಿ ರಚನೆಗೊಂಡಿದೆ. ಇಂತಹ ನಿಗಮಗಳು ಅಮೆರಿಕ, ಜರ್ಮನಿ, ಫ್ರಾನ್ಸ್‌ನಂತಹ ದೇಶದಲ್ಲಿ ಅಸ್ತಿತ್ವದಲ್ಲಿವೆ. ಎನ್‌ಯುಸಿಎಫ್‌ಡಿಸಿಯು ಆರ್‌ಬಿಐ ಮತ್ತು ಅರ್ಬನ್ ಬ್ಯಾಂಕ್‌ಗಳ ಮಧ್ಯೆ ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ. ಬ್ಯಾಂಕ್‌ಗಳ ಆಧುನೀಕರಿಸಲು ಮತ್ತು ಬಲಪಡಿಸಲು ನೆರವಾಗುತ್ತದೆ. ತಂತ್ರಜ್ಞಾನ ವೇದಿಕೆ ಅಭಿವೃದ್ಧಿಪಡಿಸುವ ಮೂಲಕ ತಾಂತ್ರಿಕ ಸಮಸ್ಯೆ ಪರಿಹಾರ, ಸೈಬರ್ ಭದ್ರತೆ ಪರಿಹಾರಗಳನ್ನು ಒದಗಿಸಲು ಸಹಾಯ ಮಾಡಲಿದೆ ಎಂದು ವಿವರಿಸಿದರು.

ಇದೇ ವೇಳೆ ಎನ್‌ಯುಸಿಎಫ್‌ಡಿಸಿಯ ವಿವಿಧ ಯೋಜನೆಗಳನ್ನು ತಿಳಿಸಲಾಯಿತು. ಧಾರವಾಡ, ಗದಗ, ಹಾವೇರಿ, ಉತ್ತರ ಕನ್ನಡ ಜಿಲ್ಲೆಗಳ ವಿವಿಧ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಎನ್‌ಯುಸಿಎಫ್‌ಡಿಸಿ ಸಿಇಒ ಪ್ರಭಾತ್ ಚತುರ್ವೇದಿ ಅವರು ಎನ್‌ಯುಸಿಎಫ್‌ಡಿಸಿ ಮಹತ್ವ ವಿವರಿಸಿದರು. ನ್ಯಾಫಕಬ್‌ನ ನಿರ್ದೇಶಕರಾದ ಶ್ರೀ ಎ.ಎಂ.ಹಿಂಡಸಗೇರಿ, ಮಹಾಮಂಡಳದ ನಿರ್ದೇಶಕರಾದ ಶ್ರೀ ಷಣ್ಮುಖಪ್ಪ ಮುಚ್ಚಂಡಿ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್.ಕೆರೂರೆ, ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್.ಕಿರೇಸೂರ, ಹುಬ್ಬಳ್ಳಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ.ಬಿ. ಮಠಪತಿ ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.

...1ನೇ ಪುಟದಿಂದ

ಸಾಧನೆಗಳು, ಪ್ರಗತಿ ಮತ್ತು ಭವಿಷ್ಯ – ವಿದ್ಯಾರ್ಥಿಗಳ ದೃಷ್ಟಿಕೋನ" ಎಂಬ ಪ್ರಮುಖ ವಿಷಯದ ಮೇಲೆ ಕೇಂದ್ರೀಕೃತವಾಗಿತ್ತು.

ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ರಾಜೇಶ್ ಜೈನ್ ರವರು ಮುಖ್ಯ ಭಾಷಣಕಾರರಾಗಿ ಭಾರತದ ಸಹಕಾರಿ ಬೆಳವಣಿಗೆಯ ಕುರಿತು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. (ಡಾ.) ಎಸ್.ಪಿ. ಸಿಂಗ್ ರವರು ಭಾರತದಲ್ಲಿ ಸಹಕಾರ ರಂಗದ ಸುಧಾರಣೆಯ ಕುರಿತು ವಿವರಿಸಿದರು.

ಕೆ.ಎಚ್. ಪಾಟೀಲ ಕಾನೂನು ಕಾಲೇಜಿನ ಅಧ್ಯಕ್ಷರು ಹಾಗೂ ಹಿರಿಯ ವಕೀಲರಾದ ಶ್ರೀ ಎಸ್.ಆರ್. ಕರೋಶಿ, ಬೆಂಗಳೂರಿನ ನೃಪತುಂಗ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳಾದ ಶ್ರೀ ಶಿವಪುತ್ರ ಬಾಬುರಾವ್, ಕೆ.ಎಚ್. ಪಾಟೀಲ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ. ಕಾವ್ಯ ಹೆಬ್ಬಾರ್, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ, ಕಾಲೇಜಿನ ಉಪನ್ಯಾಸಕರುಗಳು ಮತ್ತು ಕಾನೂನು ವಿದ್ಯಾರ್ಥಿಗಳು, ಮತ್ತಿತರರು ಉಪಸ್ಥಿತರಿದ್ದರು.

ಪ್ರಿಯದರ್ಶಿನಿ ಮಹಿಳಾ ಅರ್ಬನ್ ಸಹಕಾರಿ ಬ್ಯಾಂಕ್ : 29ನೇ ಸರ್ವ ಸದಸ್ಯರ ಮಹಾಸಭೆ

ಹಾವೇರಿ : ಪ್ರಿಯದರ್ಶಿನಿ ಮಹಿಳಾ ಅರ್ಬನ್ ಸಹಕಾರಿ ಬ್ಯಾಂಕಿನ 29ನೇ ಸರ್ವ ಸದಸ್ಯರ ಮಹಾಸಭೆಯು ದಿನಾಂಕ : 06-09-2026ರಂದು ಹಾವೇರಿ ಶಿವಬಸವ ನಗರದ ಶ್ರೀ ಸಿಂದಗಿ ಮಠದ ಸಭಾ ಮಂಟಪದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ದಾಕ್ಷಾಯಣಿ ಗಾಣಿಗೇರ ರವರ ಅಧ್ಯಕ್ಷತೆಯಲ್ಲಿ ಜರುಗಿತು.

ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು ಎಲ್ಲ ಆಡಳಿತ ಮಂಡಳಿ ನಿರ್ದೇಶಕರು ಮಹಾಸಭೆಯನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ, ಸಭಾಧ್ಯಕ್ಷರು ವಾರ್ಷಿಕ ವರದಿ ವಾಚನ ಮಾಡಿ ಸನ್ 2025-26ನೇ ಸಾಲಿನ ಬ್ಯಾಂಕಿನ ಆರ್ಥಿಕ ವ್ಯವಹಾರಗಳ ಸಮೀಕ್ಷೆಯನ್ನೊಳಗೊಂಡ ವಾರ್ಷಿಕ ವರದಿಯನ್ನು ಮತ್ತು 2026ನೇ ಮಾರ್ಚ 31ಕ್ಕೆ ಮುಕ್ತಾಯಗೊಂಡ ಲೆಕ್ಕಪರಿಶೋಧಿತ ಅಢಾವೆ ಹಾಗೂ ಹಾಗೂ ಲಾಭ-ಹಾನಿ ತಃಖ್ತೆಗಳನ್ನು ಬ್ಯಾಂಕಿನ ನಿರ್ದೇಶಕರ ಮಂಡಳಿ ಪರವಾಗಿ ವರದಿ ಮಂಡಿಸಿದರು ದಿನಾಂಕ : 31-03-2026ಕ್ಕೆ ಇದ್ದಂತೆ ರೂ. 31.38 ಕೋಟಿ ಠೇವಣಿ ಸಂಗ್ರಹವಾಗಿ ರೂ.22.36 ಕೋಟಿ ಸಾಲ ನೀಡಿದೆ, ದುಡಿಯುವ ಬಂಡವಾಳವು ರೂ. 37 ಕೋಟಿ ವರೆಗೆ ದಾಖಲಾಗಿದ್ದು, ಕಳೆದು ಸಾಲಿಗಿಂತ ಒಟ್ಟಾರೆ ಶೇ.23% ರಷ್ಟು ಪ್ರಗತಿ ಸಾಧಿಸಿದೆ, ವರದಿ ಸಾಲಿನಲ್ಲಿ ರೂ.64.49 ಲಕ್ಷ ಲಾಭ ಗಳಿಸಿ ಆದಾಯ ತೆರಿಗೆ ನಂತರದ ನಿವ್ವಳ ಲಾಭ ರೂ.48.27 ಲಕ್ಷ ಗಳಿಸಿದೆ ಮತ್ತು ನಿವ್ವಳ ಎನ್.ಪಿ.ಎ. ಪ್ರಮಾಣವು ಶೂನ್ಯದಲ್ಲಿದೆ ಮತ್ತು ಆಡಿಟ್ 'ಅ' ಶ್ರೇಣಿಯಲ್ಲಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು. ಬ್ಯಾಂಕು ಕಳೆದ 29 ವರ್ಷಗಳ ಪಯಣದಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿರುವುದು ಪ್ರಶಂಸಗೆ ಪಾತ್ರವಾಗಿದೆ ಎಂದರು. ಸನ್ 2025-26 ನೇ ಸಾಲಿಗೆ ಸದಸ್ಯರಿಗೆ ಶೇಕಡ 12 ರಷ್ಟು ಡಿವಿಡೆಂಡ ಘೋಷಿಸಿರುವುದನ್ನು ಸಭೆಯಲ್ಲಿ ಅನುಮೋದನೆ ಪಡೆದರು.

ಬ್ಯಾಂಕಿನ ಆಡಳಿತ ಮಂಡಳಿ ಪರವಾಗಿ ಎಲ್ಲ ಸದಸ್ಯರಿಗೂ, ಗ್ರಾಹಕರಿಗೂ, ಸಹಕಾರಿ ಇಲಾಖಾಧಿಕಾರಿಗಳಿಗೆ, ಭಾರತೀಯ ರಿಸರ್ವ ಬ್ಯಾಂಕ್ ಅಧಿಕಾರಿಗಳಿಗೆ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರು, ಆಡಳಿತ ಮಂಡಳಿಯವರು, ಸಿ.ಇ.ಓ ಮತ್ತು ಬ್ಯಾಂಕಿಂಗ್ ಸಲಹೆಗಾರರಿಗೂ ಮತ್ತು ಎಲ್ಲ ಸಹಕಾರ ಕ್ಷೇತ್ರದ ಬಂಧುಗಳಿಗೆ ಕೃತಜ್ಞತೆ ಸಲ್ಲಿಸಿದರು.

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಮತಿ ವಿಮಲ್ ಹಿಂಚಿಗೇರಿ ಅವರು ಸೇರಿದಂತೆ ಎಲ್ಲ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ವೃತ್ತಿನಿರತ ನಿರ್ದೇಶಕರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಈ ಸಂಧರ್ಭದಲ್ಲಿ ಬ್ಯಾಂಕಿನ 6 ಜನರಿಗೆ ಉತ್ತಮ ಸದಸ್ಯರು ಮತ್ತು ಗ್ರಾಹಕರಿಗೆ ಸನ್ಮಾನಿಸಿ ಗೌರವಿಸಲಾಯಿತು, ಬ್ಯಾಂಕಿನ ಸದಸ್ಯರ 17 ಮಕ್ಕಳಿಗೆ ಪ್ರತಿಭಾ ಪುರಸ್ಕರಿಸಲಾಯಿತು, ಈ ಮಹಾಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಉಪಸ್ಥಿತರಿದ್ದರು.

ಪ್ರಗತಿ ಕೋ-ಆಪರೇಟಿವ್ ಬ್ಯಾಂಕ್ : 55ನೇ ವಾರ್ಷಿಕ ಸರ್ವಸದಸ್ಯರ ಸಭೆ

ಬೆಂಗಳೂರು : ದಿನಾಂಕ : 26.08.2026 ರಂದು ಪ್ರಗತಿ ಕೋ-ಆಪರೇಟಿವ್ ಬ್ಯಾಂಕಿನ 55ನೇ ವಾರ್ಷಿಕ ಸರ್ವಸದಸ್ಯರ ಸಭೆಯು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ.ಎಸ್. ರೇಣುಕಾರಾಧ್ಯರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಭೆಯಲ್ಲಿ ಅಧ್ಯಕ್ಷರು ಮಾತನಾಡಿ 1972 ರಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಿಶೇಷವಾಗಿ ಗುರುತಿಸಲ್ಪಟ್ಟಿರುವ ಪ್ರಗತಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್. 2017-18 ರಿಂದ ಗಣನೀಯವಾಗಿ ಪ್ರಗತಿ ಸಾಧಿಸಿದ್ದು, 2025-26ನೇ ಸಾಲಿನಲ್ಲಿ ರೂ.1.82 ಕೋಟಿ ನಿರ್ವಹಣಾ ಲಾಭಗಳಿಸಿದ್ದು, ಸರ್ಕಾರಕ್ಕೆ ಆದಾಯ ತೆರಿಗೆ ಪಾವತಿಸುವ ಬಗ್ಗೆ ಅನುವು ಮಾಡಿದ ನಂತರ ರೂ.1.33 ಕೋಟಿ ನಿಕ್ಕಿ ಲಾಭ ಗಳಿಸಿದೆ ಎಂದು ತಿಳಿಸಿದರು.

ಬ್ಯಾಂಕಿನ ಠೇವಣಿಗಳು ರೂ.148.81 ಕೋಟಿ ತಲುಪಿದ್ದು, ಸಾಲ ಮುಂಗಡಗಳು ರೂ.98.34 ಕೋಟಿಗಳಿಗೆ ತಲುಪಿದೆ, ಷೇರು ಬಂಡವಾಳ ಮತ್ತು ಸ್ವಂತ ನಿಧಿಗಳು ರೂ.23.07 ಕೋಟಿಗಳಾಗಿದ್ದು, ಒಟ್ಟು ದುಡಿಯುವ ಬಂಡವಾಳ ರೂ.170.55 ಕೋಟಿಗಳಿಗೆ ಏರಿಕೆಯಾಗಿದೆ. ಬ್ಯಾಂಕಿನ ಸಿ.ಆರ್.ಎ.ಆರ್. 17.04 ಇದ್ದು ಇದು ಬ್ಯಾಂಕಿನ ಆರ್ಥಿಕ ಸುಭದ್ರತೆಯ ಸಂಕೇತವಾಗಿದೆ. ಒಟ್ಟು 8519 ಷೇರು ಸದಸ್ಯರನ್ನು ಹೊಂದಿರುವ ಬ್ಯಾಂಕ್ ಷೇರು ರೂ.5.49 ಕೋಟಿಗಳಿಗೆ ವೃದ್ಧಿಸಿಕೊಂಡಿದೆ. ಎಲ್ಲಾ ಮೂರು ಶಾಖೆಗಳಲ್ಲಿ ಗ್ರಾಹಕರಿಗೆ ಉತ್ತಮ ಸೇವೆ ನೀಡಲಾಗುತ್ತಿದೆ. ಬ್ಯಾಂಕು ಲೆಕ್ಕ ಪರಿಶೋಧನೆಯಲ್ಲಿ 'ಅ' ವರ್ಗದಲ್ಲಿ ಮುಂದುವರೆದಿದೆ. ಬ್ಯಾಂಕಿನ ಎನ್‌ಪಿಎ ಪ್ರಮಾಣ 0% ಇರುತ್ತದೆ ಎಂದು ತಿಳಿಸಲು ಹರ್ಷವೆನಿಸುತ್ತದೆ ಎಂದರು. ಬ್ಯಾಂಕ್ ಪ್ರಸಕ್ತ ಸಾಲಿನಲ್ಲಿ ಸದಸ್ಯರಿಗೆ 10% ಡಿವಿಡೆಂಟ್ ಘೋಷಿಸಿದೆ.

ಈ ಸಮಾರಂಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಎನ್.ಬಿ.ವಿರೂಪಾಕ್ಷಪ್ಪ, ನಿರ್ದೇಶಕರುಗಳಾದ ಶ್ರೀ. ಕೇಶವ.ಕೆ.ಹೆಗಡೆ, ಶ್ರೀ ಸಿ. ಚಂದ್ರಯ್ಯ, ಶ್ರೀ ಕೆ.ಬಿ ನವೀನ್ ಕುಮಾರ್, ಶ್ರೀ ಹೆಚ್.ಜಿ ಪ್ರಕಾಶ್, ಡಾ. ಟಿ.ಡಿ. ನಾಗೇಂದ್ರ ಕುಮಾರ್, ಶ್ರೀ. ಎಸ್.ರಾಜಣ್ಣ, ಶ್ರೀ ನಿರಂಜನ್ ಮೂರ್ತಿ, ಶ್ರೀ ಕಿರಣ್ ಕುಮಾರ್ ಎಚ್. ಎಸ್, ಶ್ರೀ ಲೋಕೇಶ್ ಬಿ.ಪಿ, ಶ್ರೀ ಸಿದ್ದೇಶ್ವರ. ಎಸ್, ಶ್ರೀಮತಿ ಭ್ರಮಾರಂಭ ಬಿ.ಎಸ್, ಶ್ರೀಮತಿ ರಮಣಿ ದಯಾನಂದ್, ಶ್ರೀ ಎನ್ ಜಗದೀಶ, ಶ್ರೀ ನಂದೀಶಯ್ಯ ಟಿ.ಜಿ. ಹಾಗೂ BOM ಚೇರ್ಮನ್‌ರಾದ ಶ್ರೀ ಚಂದ್ರಯ್ಯ, BOM ಸದಸ್ಯರುಗಳಾದ ಶ್ರೀ ನಾರಾಯಣ ಸ್ವಾಮಿ, ಶ್ರೀ ಗುಂಡುರಾಜ್, ಶ್ರೀ ಪಂಚಾಕ್ಷರಯ್ಯ ಹಾಗೂ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಎಂ.ಎಸ್. ಪ್ರಸಾದ್ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

ತುಮಕೂರು ವೀರಶೈವ ಸಹಕಾರ ಬ್ಯಾಂಕ್ : 48ನೇ ಸರ್ವಸದಸ್ಯರ ಮಹಾಸಭೆ

ತುಮಕೂರು ನಗರದ ಬಾವಿಕಟ್ಟೆ ಕಲ್ಯಾಣ ಮಂಟಪದಲ್ಲಿ ತುಮಕೂರು ವೀರಶೈವ ಸಹಕಾರ ಬ್ಯಾಂಕಿನ 48ನೇ ವರ್ಷದ 2025-26ನೇ ಸಾಲಿನ ಸರ್ವಸದಸ್ಯರ ಮಹಾಸಭೆ ದಿನಾಂಕ: 20.09.2026 ರಂದು ನಡೆಯಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಜೆ. ರುದ್ರಪ್ಪ, ಉಪಾಧ್ಯಕ್ಷರಾದ ಶ್ರೀ ಕೆ.ಮಲ್ಲಿಕಾರ್ಜುನಯ್ಯ, ನಗರ ವೀರಶೈವ ಸಮಾಜದ ಅಧ್ಯಕ್ಷರಾದ ಶ್ರೀ ಕೋರಿ ಮಂಜುನಾಥ್., ಸ್ನೇಹ ಸಂಗಮ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಬಿ.ಎಸ್. ಮಂಜುನಾಥ್., ರೇಣುಕ ವಿದ್ಯಾಪೀಠದ ಅಧ್ಯಕ್ಷರಾದ ಶ್ರೀ ಟಿ.ಆರ್. ಲೋಕೇಶ್., ರವರುಗಳಿಂದ ದೀಪ ಬೆಳಗಿಸುವ ಮೂಲಕ ಸಭೆ ಉದ್ಘಾಟಿಸಲಾಯಿತು.

ಈ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶಕರುಗಳಾದ ಶ್ರೀ ಟಿ.ಜೆ. ಗಿರೀಶ್., ಶ್ರೀ ಏಕಾಂತ್ ಟಿ.ಎಲ್., ಶ್ರೀ ಆರ್.ಮಂಜುನಾಥ್., ಶ್ರೀ ಯೋಗೀಶ್ ಟಿ.ಆರ್., ಶ್ರೀ ರವಿಶಂಕರ್ ಪಿ., ಶ್ರೀ ಷಣ್ಮುಖಸ್ವಾಮಿ ಟಿ.ಎಸ್., ಶ್ರೀ ರೇಣುಕರಾಧ್ಯ ಬಿ., ಶ್ರೀ ಈ.ಎಸ್. ಸಂತೋಷ್ ಕುಮಾರ್., ಶ್ರೀ ಟಿ.ವಿ. ಚಂದ್ರಶೇಖರ್., ಶ್ರೀ ಬಿ. ನಾಗರಾಜು., ಶ್ರೀ ಟಿ.ಎನ್. ಶ್ರೀಕಂಠಸ್ವಾಮಿ., ಶ್ರೀ ಟಿ.ಎಂ. ಸಂತೋಷ್., ಶ್ರೀ ಕೆ.ಎಸ್. ಅರುಣ್ ಕುಮಾರ್., ಶ್ರೀ ಅರ್ಜುನ್ ಎಂ. ವೀರೇಶ್., ಶ್ರೀ ಗಣೇಶ್ ಜಿ. ಪ್ರಸಾದ್., ಶ್ರೀಮತಿ ಹೆಚ್. ಎಂ. ದೀಪಶ್ರೀ, ಶ್ರೀಮತಿ ಎ.ಯು.ರೂಪ., ವೃತ್ತಿಪರ ನಿರ್ದೇಶಕರುಗಳಾದ ಶ್ರೀ ಸುದರ್ಶನ್ ಬಿ., ಶ್ರೀ ಕಾರ್ತಿಕ್ ಟಿ ಪಿ., ಬ್ಯಾಂಕಿನ ಪ್ರಭಾರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ವೀಣಾ ಬಿ.ಜೆ. ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ : 45ನೇ ಸರ್ವಸದಸ್ಯರ ಮಹಾಸಭೆ

ತುಮಕೂರು : ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿಯಮಿತ, ತುಮಕೂರು. ಇದರ 45ನೇ ವರ್ಷದ 2025–26ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 30/08/2026ರಂದು ಭಾನುವಾರ ತುಮಕೂರು ನಗರದ ಮಹಾವೀರ ರಸ್ತೆಯಲ್ಲಿರುವ ಮಹಾವೀರ ಭವನದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ.ಬಿ.ವಿ. ರಾಜೇಂದ್ರಕುಮಾರ್ ರವರ ಅಧ್ಯಕ್ಷತೆಯಲ್ಲಿ ನಡೆಸಿದರು. ಉಪಾಧ್ಯಕ್ಷರಾದ ಶ್ರೀ ಸುನಿಲ್ ಕುಮಾರ್.ವಿ, ನಿರ್ದೇಶಕರುಗಳಾದ ಶ್ರೀ ಬಿ.ಕೆ. ಪ್ರದೀಪ್, ಶ್ರೀ ಸಿ. ಅರುಣ್ ಕುಮಾರ ಜೈನ್, ಶ್ರೀ ಎ.ಸಂತೋಷ್, ಶ್ರೀ ಮಹಾವೀರ್ ಜೈನ್, ಶ್ರೀ ಹೆಚ್.ಜೆ.ರಾಕೇಶ್ ಕುಮಾರ್, ಶ್ರೀ ಹೆಚ್.ವಿ.ರಾಜಣ್ಣ, ಶ್ರೀ ಎಲ್.ದೇವೇಂದ್ರನಾಥ್, ಶ್ರೀ ಎ.ವೈ. ಬ್ರಹ್ಮಪ್ರಕಾಶ್, ಶ್ರೀ ಅಭಯ ಕುಮಾರ್.ಎ.ಜೆ., ಶ್ರೀ ಜಿನೇಶ್.ಎಸ್.ಡಿ, ಶ್ರೀಮತಿ ಸುಜಾತಾ ಸುಮತಿಕುಮಾರ್, ಶ್ರೀಮತಿ ಮಾನಸ .ಪಿ, ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳಾದ ಶ್ರೀ ಜ್ವಾಲಾಪ್ರಸಾದ್ ರವರು ಸಿಬ್ಬಂದಿವರ್ಗದವರು ಯಶಸ್ವಿಯಾಗಿ ನಡೆಸಿಕೊಟ್ಟರು. ಇದೇ ಸಂದರ್ಭದಲ್ಲಿ ಅಧ್ಯಕ್ಷರು ಬ್ಯಾಂಕ್ 2025–26ನೇ ಸಾಲಿನಲ್ಲಿ ಆಧಾಯ ತೆರಿಗೆ ಪಾವತಿಸಿದ ನಂತರ ರೂ.98.89 ಲಕ್ಷಗಳ ನಿವ್ವಳ ಲಾಭ ಗಳಿಸಿ ಶೇ.15% ಡಿವಿಡೆಂಡ್ ವಿತರಿಸಲು ತೀರ್ಮಾನಿಸಲಾಗಿದೆ ಎಂದು ಮಹಾಸಭೆಯಲ್ಲಿ ಘೋಷಿಸಿದರು. ಹಾಗೂ 2025–26ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಗಳಲ್ಲಿ ಅತೀ ಹೆಚ್ಚು ಅಂಕಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಎಂ.ಸಿ.ಸಿ. ಬ್ಯಾಂಕ್‌ನ 108ನೇ ವಾರ್ಷಿಕ ಮಹಾಸಭೆ : ರೂ.10.07 ಕೋಟಿ ನಿವ್ವಳ ಲಾಭ, ಶೇ.10% ಡಿವಿಡೆಂಡ್ ಘೋಷಣೆ

ಮಂಗಳೂರು : ಎಂ.ಸಿ.ಸಿ. ಬ್ಯಾಂಕಿನ 108ನೇ ವಾರ್ಷಿಕ ಮಹಾಸಭೆಯು 20.09.2026ರಂದು ಲೊಯೊಲಾ ಆಡಿಟೋರಿಯಂ, ಸಂತ ಅಲೋಶಿಯಸ್ ಪಿ.ಯು. ಕಾಲೇಜು, ಕೊಡಿಯಾಲಬೈಲ್, ಮಂಗಳೂರು ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಸಹಕಾರ ರತ್ನ ಶ್ರೀ ಅನಿಲ್ ಲೋಬೊ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯ ಆರಂಭದಲ್ಲಿ ದೀಪ ಬೆಳಗಿಸುವ ಕಾರ್ಯಕ್ರಮವನ್ನು ಬ್ಯಾಂಕಿನ ಅಧ್ಯಕ್ಷರಾದ ಸಹಕಾರ ರತ್ನ ಶ್ರೀ ಅನಿಲ್ ಲೋಬೊ ಅವರೊಂದಿಗೆ ವಿಶೇಷ ಆಹ್ವಾನಿತರು ಹಾಗೂ ಗಣ್ಯರು ನೆರವೇರಿಸಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಬ್ಯಾಂಕಿನ ಅಧ್ಯಕ್ಷರಾದ ಸಹಕಾರ ರತ್ನ ಶ್ರೀ ಅನಿಲ್ ಲೋಬೊ ಅವರು ಬ್ಯಾಂಕಿನ ಸದೃಢ ಹಣಕಾಸು ಪ್ರಗತಿಯನ್ನು ವಿವರಿಸಿದರು. 2025–26ನೇ ಸಾಲಿನಲ್ಲಿ ಬ್ಯಾಂಕ್ ರೂ.10.07 ಕೋಟಿ ನಿವ್ವಳ ಲಾಭ ಗಳಿಸಿದ್ದು, ಠೇವಣಿಗಳು ರೂ.872.88 ಕೋಟಿ, ಮುಂಗಡಗಳು ರೂ.652.06 ಕೋಟಿ, ಕಾರ್ಯನಿರತ ಬಂಡವಾಳ ರೂ. 1,008 ಕೋಟಿ ಎಂದು ತಿಳಿಸಿದರು. ಬ್ಯಾಂಕಿನ ಷೇರು ಬಂಡವಾಳ ರೂ. 34.08 ಕೋಟಿ ಇದ್ದು, ನಿವ್ವಳ NPA 1.26%, Provision Coverage Ratio 68.34%, Return on Assets (ROA) 1.00% ಹಾಗೂ 31 ಮಾರ್ಚ್ 2026ರಂತೆ CRAR 16.53% ರಷ್ಟಿದೆ ಎಂದು ಅವರು ತಿಳಿಸಿದರು. ಬ್ಯಾಂಕಿನ ಒಟ್ಟು ವ್ಯವಹಾರವು ರೂ.1525 ಕೋಟಿಯನ್ನು ಮೀರಿದೆ ಎಂದರು. ಸದಸ್ಯರಿಗೆ ಶೇ.10 ಡಿವಿಡೆಂಡ್ ಘೋಷಿಸಲಾಯಿತು. ಸಭೆಯ ವೇದಿಕೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಜೆರಾಲ್ಡ್ ಜೂಡ್ ಡಿಸಿಲ್ವಾ ಹಾಗೂ ನಿರ್ದೇಶಕರಾದ ಶ್ರೀ ಆಂಡ್ರ್ಯೂ ಡಿಸೋಜ, ಶ್ರೀ ಜೋಸೆಫ್ ಎಂ. ಅನಿಲ್ ಪತ್ರಾವೊ, ಡಾ. ಜೆರಾಲ್ಡ್ ಪಿಂಟೊ, ಶ್ರೀ ಡೇವಿಡ್ ಡಿಸೋಜ, ಶ್ರೀ ಎಲ್ರಾಯ್ ಕಿರಣ್ ಕ್ರಾಸ್ಟೊ, ಶ್ರೀ ರೋಶನ್ ಡಿಸೋಜ, ಶ್ರೀ ಹೆರಾಲ್ಡ್ ಮೊಂತೆರೊ, ಶ್ರೀ ಜೆ.ಪಿ. ರೊಡ್ರಿಗಸ್, ಶ್ರೀ ವಿನ್ಸೆಂಟ್ ಲಸ್ರಾದೊ, ಶ್ರೀ ಮೆಲ್ವಿನ್ ವಾಸ್, ಶ್ರೀಮತಿ ಐರಿನ್ ರೆಬೆಲ್ಲೊ, ಡಾ. ಫ್ರೀಡಾ ಡಿಸೋಜ, ವೃತ್ತಿಪರ ನಿರ್ದೇಶಕರಾದ ಶ್ರೀ ಸಿ.ಜಿ. ಪಿಂಟೊ ಹಾಗೂ ಶ್ರೀ ಸುಶಾಂತ್ ಸಲ್ಡಾನ್ಹಾ ಮತ್ತು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸುನಿಲ್ ಮಿನೇಜಸ್ ಉಪಸ್ಥಿತರಿದ್ದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸುನಿಲ್ ಮಿನೇಜಸ್ ಅವರು ಸದಸ್ಯರನ್ನು ಸ್ವಾಗತಿಸಿದರು. ಶ್ರೀ ಡೆರಿಲ್ ಲಸ್ರಾದೊ, ಮುಖ್ಯ ವ್ಯವಸ್ಥಾಪಕರು, ಮೋರ್ಗನ್ಸ್ ಗೇಟ್ ಕಾರ್ಯಕ್ರಮವನ್ನು ನಿರೂಪಿಸಿದರು.

ನಿಮ್ಮ ಪ್ರಶ್ನೆ ನಮ್ಮ ಉತ್ತರ



ಸುಧಾಕರ್ ಭಟ್, ಬ್ಯಾಂಕಿಂಗ್ ಸಲಹೆಗಾರರು.

1. ಅನುತ್ಪಾದಕ ಸಂದೇಹಾಸ್ಪದ ಆಸ್ತಿಯ ಮೇಲೆ ಶೇ.100ರಷ್ಟು ಮೀಸಲು (Provision) ಹೊಂದಿದ್ದೇವೆ. ಉತ್ತಮ ಆರ್ಥಿಕ ವರದಿಯನ್ನು ಸಿದ್ಧಪಡಿಸುವ ಉದ್ದೇಶದಿಂದ, ಈ ಅನುತ್ಪಾದಕ ಆಸ್ತಿಗಳನ್ನು ತಾಂತ್ರಿಕವಾಗಿ ಮನ್ನಾ ಮಾಡುವ ಬಗ್ಗೆ ಯೋಚಿಸುತ್ತಿದ್ದೇವೆ. ಈ ಬಗ್ಗೆ ನಮ್ಮ ಈ ಕೆಳಗಿನ ಸಂಶಯಗಳಿಗೆ ಉತ್ತರ ನೀಡಿ.

i. ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ, ಪಟ್ಟಣ ಸಹಕಾರ ಬ್ಯಾಂಕುಗಳು ಸಾಲದ ಖಾತೆಗಳನ್ನು ತಾಂತ್ರಿಕವಾಗಿ ಮನ್ನಾ ಮಾಡಲು ಅವಕಾಶವಿದೆಯೇ?

ii. ತಾಂತ್ರಿಕ ಮನ್ನಾ ಪ್ರಕ್ರಿಯೆಯನ್ನು ಕೈಗೊಳ್ಳುವ ಮೊದಲು ರಿಜಿಸ್ಟ್ರಾರರ ಅಥವಾ ಇನ್ನಾವುದೇ ನಿಯಂತ್ರಕ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯುವ ಅಗತ್ಯವಿದೆಯೇ?

iii. ನಿರ್ದೇಶಕ ಮಂಡಳಿಯಿಂದ ಅನುಮೋದನೆ ಪಡೆದರೆ ಸಾಕೇ ಅಥವಾ ಸಾಮಾನ್ಯ ಸಭೆಯ ಅನುಮೋದನೆ / ದೃಢೀಕರಣವೂ ಅಗತ್ಯವಿದೆಯೇ?

– ಪಟ್ಟಣ ಸಹಕಾರ ಬ್ಯಾಂಕ್ ಲಿ., ಮೈಸೂರು.

ಉತ್ತರ: ಈ ಸಂಬಂಧ, ನಮ್ಮ ಸಲಹೆ ಈ ಕೆಳಗಿನಂತಿದೆ.

i. ಸುಸ್ತಿ ಸಾಲಗಳ ತಾಂತ್ರಿಕ ಮನ್ನಾ ಪ್ರಕ್ರಿಯೆಯನ್ನು ಕೈಗೊಳ್ಳಲು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಅಧಿಕಾರವಿದೆ. ತಾಂತ್ರಿಕ ಮನ್ನಾಕ್ಕಾಗಿ, ಮಂಡಳಿಯಿಂದ ಅನುಮೋದನೆ ಪಡೆದ ನೀತಿಯನ್ನು ಜಾರಿಗೆ ತನ್ನಿ.

ii. ಸುಸ್ತಿ ಸಾಲಗಳ ತಾಂತ್ರಿಕ ಮನ್ನಾ ಮಾಡಲು ರಿಜಿಸ್ಟ್ರಾರರ ಅಥವಾ ಇನ್ನಾವುದೇ ಪ್ರಾಧಿಕಾರದ ಪೂರ್ವಾನುಮತಿ ಪಡೆಯುವ ಅಗತ್ಯವಿಲ್ಲ.

iii. ಸಾಮಾನ್ಯ ಸಭೆಯ ಅನುಮೋದನೆ ಪಡೆಯುವ ಅಗತ್ಯವಿಲ್ಲ.

ದಯವಿಟ್ಟು ರಿಜರ್ವ್ ಬ್ಯಾಂಕಿನ ಒತ್ತಡಕ್ಕೊಳಗಾದ ಆಸ್ತಿಗಳ ಇತ್ಯರ್ಥ – ನಿರ್ದೇಶನಗಳು 2025ರ ಅಧ್ಯಾಯ-IV ಬಿ ರಲ್ಲಿನ ಸೂಚನೆಗಳನ್ನು ಅನುಸರಿಸಿ.

2. ನಮ್ಮ ಬ್ಯಾಂಕಿನಲ್ಲಿ ಹೊಸತಾಗಿ ನೇಮಕಗೊಂಡ ಮಹಿಳಾ ಉದ್ಯೋಗಿಯೊಬ್ಬರು ತಮ್ಮ ಪ್ರೋಬೇಷನರಿ ಅವಧಿಯಲ್ಲಿ ಹೆರಿಗೆ ರಜೆಯ ಮೇಲೆ ತೆರಳಿದ್ದಾರೆ. ಆದ್ದರಿಂದ ಈ ಅವಧಿಯಲ್ಲಿ ಅವರ ವೇತನ, ಪ್ರೋಬೇಷನರಿ ಅವಧಿಯ ವಿಸ್ತರಣೆ, ಅವರನ್ನು ಖಾಯಂಗೊಳಿಸುವುದು ಮತ್ತು ರಜೆ ಮಂಜೂರಾತಿ ಮುಂತಾದ ವಿಷಯಗಳನ್ನು ಹೇಗೆ ನಿರ್ವಹಿಸಬೇಕು ಎಂಬುದನ್ನು ನಾವು ತಿಳಿಯಬಯಸುತ್ತೇವೆ.

– ಪಟ್ಟಣ ಸಹಕಾರ ಬ್ಯಾಂಕ್ ಲಿ., ಉತ್ತರ ಕನ್ನಡ ಜಿಲ್ಲೆ.

ಉತ್ತರ : ಹೆರಿಗೆ ಸೌಲಭ್ಯ ಕಾಯ್ದೆ, 1961 (Maternity Benefit Act, 1961) ಮತ್ತು ಅದರ 2017ರ ತಿದ್ದುಪಡಿಯ ಪ್ರಕಾರ, ಯಾವುದೇ ಮಹಿಳಾ ಉದ್ಯೋಗಿಯು ಹೆರಿಗೆಯ ನಿರೀಕ್ಷಿತ ದಿನಾಂಕಕ್ಕಿಂತ ಮೊದಲು ಕನಿಷ್ಠ 80 ದಿನಗಳು ಆ ಸಂಸ್ಥೆಯಲ್ಲಿ ಕೆಲಸ ಮಾಡಿದ್ದರೆ, ಆಕೆಗೆ 26 ವಾರಗಳ (ಸುಮಾರು 6 ತಿಂಗಳು) ವೇತನ ಸಹಿತ ಹೆರಿಗೆ ರಜೆಯ ಪೂರ್ಣ ಹಕ್ಕಿರುತ್ತದೆ. ಉದ್ಯೋಗಿಯು ಪ್ರೊಬೇಷನರಿ ಹಂತದಲ್ಲಿದ್ದಾರೆ ಎಂಬ ಕಾರಣಕ್ಕೆ ಈ ಹಕ್ಕನ್ನು ನಿರಾಕರಿಸುವಂತಿಲ್ಲ.

ಬ್ಯಾಂಕಿನ ಆಂತರಿಕ ನಿಯಮಗಳು ಅಥವಾ ಪ್ರೊಬೇಷನರಿ ನಿಯಮಗಳಿಗಿಂತ ಕೇಂದ್ರ ಸರ್ಕಾರದ 'ಹೆರಿಗೆ ಸೌಲಭ್ಯ ಕಾಯ್ದೆ' ಮೇಲುಗೈ ಸಾಧಿಸುತ್ತದೆ.

ಪ್ರೊಬೇಷನರಿ ಅವಧಿಯ ಮುಖ್ಯ ಉದ್ದೇಶವೇ ಉದ್ಯೋಗಿಯ ಕೆಲಸ, ದಕ್ಷತೆ ಮತ್ತು ನಡತೆಯನ್ನು ಮೌಲ್ಯಮಾಪನ ಮಾಡುವುದು. ಉದ್ಯೋಗಿಯು 6 ತಿಂಗಳು ರಜೆಯಲ್ಲಿದ್ದರೆ, ಆಕೆಯ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಲು ಬ್ಯಾಂಕಿಗೆ ಸಾಧ್ಯವಾಗುವುದಿಲ್ಲ. ರಜೆಯ ಅವಧಿಗೆ ತಕ್ಕಂತೆ ಪ್ರೊಬೇಷನ್ ಅವಧಿ ವಿಸ್ತರಣೆಯಾಗುತ್ತದೆ. ಪ್ರೊಬೇಷನರಿ ಅವಧಿ ಮುಗಿದು, ಕೆಲಸ ತೃಪ್ತಿಕರವಾಗಿದ್ದಲ್ಲಿ ಮಾತ್ರ ಹುದ್ದೆಯನ್ನು ಖಾಯಂಗೊಳಿಸಲಾಗುತ್ತದೆ.

ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು /ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ – ಬೀದರ್

ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳು ಮತ್ತು ಆಡಳಿತಾತ್ಮಕ ಸುಧಾರಣೆಗಳ ಕುರಿತು ಜ್ಞಾನವನ್ನು ವೃದ್ಧಿಸುವ ನಿಟ್ಟಿನಲ್ಲಿ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ನಿರ್ದೇಶಕರುಗಳಿಗಾಗಿ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ದಿನಾಂಕ:28ನೇ ಅಕ್ಟೋಬರ್ 2026ರ ಬುಧವಾರ ದಂದು "ಮಹಾಂತಪ್ಪ ಮಡಕಿ ಸಭಾ ಭವನ" ದಿ ಗಾಂಧಿ ಗಂಜ ಕೋ–ಆಪ್ ಬ್ಯಾಂಕ್ ಲಿ., ಗಾಂಧಿ ಗಂಜ, ಬೀದರ್ – 585 403 ಇಲ್ಲಿ ಏರ್ಪಡಿಸಲಾಗಿರುತ್ತದೆ.

ಸದರಿ ವಿಚಾರ ಸಂಕಿರಣದಲ್ಲಿ ಈ ಕೆಳಗೆ ವಿವರಿಸಿದ ವಿಷಯಗಳ ಮೇಲೆ ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಸದರಿ ಕಾರ್ಯಕ್ರಮವನ್ನು ದಿನಾಂಕ : 28.10.2026ರಂದು ಬೆಳಿಗ್ಗೆ 08.30 ಗಂಟೆಗೆ ಉಪಹಾರ ಹಾಗೂ ನೋಂದಣಿಯೊಂದಿಗೆ ಪ್ರಾರಂಭಿಸಲಾಗುವುದು.

- Corporate Governance (ಕಾರ್ಪೊರೇಟ್ ಆಡಳಿತ)
- Duties and Responsibilities of Board of Directors in UCBs (ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯ ಕರ್ತವ್ಯಗಳು ಮತ್ತು ಜವಾಬ್ದಾರಿಗಳು)
- Important Provisions of KCS Act and Recent Amendments (ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಪ್ರಮುಖ ನಿಯಮಗಳು ಮತ್ತು ಇತ್ತೀಚಿನ ತಿದ್ದುಪಡಿಗಳು)
- Regulatory Concern - RBI Perspective (ಭಾರತೀಯ ರಿಸರ್ವ್ ಬ್ಯಾಂಕ್ (RBI)ನ ನಿಯಂತ್ರಣ ಕ್ರಮಗಳು ಮತ್ತು ದೃಷ್ಟಿಕೋನ)

ಪ್ರಯುಕ್ತ, ದಿನಾಂಕ : 23.10.2026ರೊಳಗಾಗಿ ಕಡ್ಡಾಯವಾಗಿ ಪ್ರತಿನಿಧಿಗಳ ಹೆಸರುಗಳನ್ನು ಮಹಾಮಂಡಳದ ಇ–ಮೇಲ್ ವಿಳಾಸ : kscubfed@gmail.comಗೆ ತಪ್ಪದೇ ಕಳುಹಿಸಿಕೊಡಬೇಕಾಗಿ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಉಪ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ (7411332655) ಮತ್ತು ಶ್ರೀ ಹೆಚ್.ಸಿ. ಶ್ರೀನಿವಾಸ್ (9945566068) ಇವರುಗಳನ್ನು ಸಂಪರ್ಕಿಸಬಹುದಾಗಿದೆ. ಈ ವಿಚಾರ ಸಂಕಿರಣದಲ್ಲಿ ತಾವುಗಳು ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಯವರು ತಿಳಿಸಿದ್ದಾರೆ.

ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
ಕುತೂಹಲಕಾರಿಯಾದ ಸುದ್ದಿಗಳು ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಕರ್ಕಿ ಗ್ರಾಮದ ವಡಗಲ ಮನೆಗಳಲ್ಲಿ ಬಳಕೆಯಾಗದೆ ಉಳಿದಿದ್ದ ವಸ್ತುಗಳು, ಹಳೆಯ ಬಟ್ಟೆಗಳು, ಚೀಲಗಳು ಸೇರಿದಂತೆ ತ್ಯಾಜ್ಯವನ್ನೂ ದೇವಿಗೆ ಅರ್ಪಿಸುತ್ತಾರೆ. ವಡಗಲಜ್ಜಿ ಊರಿನಿಂದ ಊರಿಗೆ ಸಂಚರಿಸುವಾಗ ತ್ಯಾಜ್ಯದೊಂದಿಗೆ ರೋಗ–ರುಜಿನಗಳನ್ನೂ ಊರಿನಿಂದ ದೂರ ಕೊಂಡೊಯ್ಯುತ್ತಾಳೆ ಎಂಬ ನಂಬಿಕೆ ಇಲ್ಲಿದೆ.
- ಬೆಂಗಳೂರಿನ ಗಾಂಧಿ ಭವನದ ಡಿಜಿಟಲ್ ವಸ್ತು ಸಂಗ್ರಹಾಲಯದಲ್ಲಿ ಮಹಾತ್ಮಾ ಗಾಂಧೀಜಿಯವರ ಬಾಲ್ಯದಿಂದ ಹಿಡಿದು ಜೀವನದ ಅಂತಿಮ ದಿನಗಳವರೆಗೆ ಅವರ ಜೀವನ ಪಯಣವನ್ನು ಡಿಜಿಟಲ್ ರೂಪದಲ್ಲಿ ಪರಿಚಯಿಸಲಾಗುತ್ತಿದ್ದು, ಛಾಯಾಚಿತ್ರಗಳು, ದಾಖಲೆಗಳು ಮತ್ತು ಕ್ಯೂಆರ್‌ಕೋಡ್ ಮೂಲಕ ಗಾಂಧೀಜಿ ಅವರ ಜೀವನದ ಸಂಕ್ಷಿಪ್ತ ಚಿತ್ರಣವನ್ನು ಇಲ್ಲಿ ಅರಿಯಬಹುದಾಗಿದೆ.
- ಗೌರಿಬಿದನೂರಿನ ದಿವಾಕರ್ ಮೊದಲು ತುಮಕೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದರು. ನಂತರ ತಮ್ಮ ಕುಟುಂಬಕ್ಕೆ ಸೇರಿದ ಗೌರಿಬಿದನೂರಿನ ಸಮೀಪದ ಏಳೂವರೆ ಎಕರೆ ಕೃಷಿ ಜಮೀನಿನಲ್ಲಿ ಖರ್ಜೂರ ಕೃಷಿ ಆರಂಭಿಸಿ ಯಶಸ್ವಿಯಾಗಿದ್ದಾರೆ. ಆರಂಭದ ದಿನಗಳಲ್ಲಿ ರಸ್ತೆ ಬದಿಯಲ್ಲೂ ಖರ್ಜೂರ ಮಾರಾಟ ಮಾಡುತ್ತಿದ್ದ ದಿವಾಕರ್ ಅವರಿಗೆ ಇಂದು ರಾಜ್ಯದ ವಿವಿಧ ಭಾಗಗಳ ಖರೀದಿದಾರರಿಂದಲೇ ಬೇಡಿಕೆ ಬರುತ್ತಿದೆ.
- 1931ರ ಸೆಪ್ಟೆಂಬರ್ 22. ಲಂಡನ್ ನಗರದ ಈಸ್ಟ್ ಇಂಡಿಯಾ ಡಾಕ್ ರಸ್ತೆಯ ಸಮೀಪದ ಒಂದು ಸಣ್ಣ ಮನೆಯ ಒಳಗೆ ಸರಳ ಉಡುಗೆಯಲ್ಲಿ ಮಹಾತ್ಮ ಗಾಂಧಿ ಮತ್ತು ವಿಶ್ವವನ್ನೇ ನಗಿಸಿದ್ದ ಚಾರ್ಲಿ ಚಾಪ್ಲಿನ್ ಮಾತುಕತೆಯಲ್ಲಿದ್ದರು. ಚಾಪ್ಲಿನ್ ಆಗಲೇ ವಿಶ್ವದ ದೊಡ್ಡ ಸಿನಿಮಾ ತಾರೆ. ಗಾಂಧಿ ಅವರು ದೇಶದ ಸ್ವಾತಂತ್ರ್ಯಕ್ಕಾಗಿ ವಿರುದ್ಧ ಹೋರಾಡುತ್ತಿದ್ದವರು. ಚಾರ್ಲಿ ಚಾಪ್ಲಿನ್ ಅವರಿಗೆ ಗಾಂಧಿ ಯಾರೆಂಬುದು ಗೊತ್ತಿತ್ತು; ಆದರೆ ಗಾಂಧಿಯವರಿಗೆ ಚಾಪ್ಲಿನ್ ಯಾರೆಂದು ತಿಳಿದಿರಲಿಲ್ಲ.
- ಶಹಾಪುರ ತಾಲ್ಲೂಕಿನ ಅಲ್ದಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಈರಣ್ಣ ಅವರು ಕನ್ನಡ ಶಿಕ್ಷಕರಾಗಿರುವ ಅವರು ತಾನು ಓದಿದ ಶಾಲೆಗೆ ಶಿಕ್ಷಕನಾಗಿ ಬಂದು, ದಾನಿಗಳಿಂದ ನೆರವು ಪಡೆದು, ಅದು ಸಾಲದೆ ಇದ್ದಾಗ ತನ್ನ ಜೇಬಿನಿಂದ ಖರ್ಚು ಮಾಡಿ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಪರಿಣಾಮ ಸರ್ಕಾರಿ ಶಾಲೆ ಮಾದರಿ ಶಾಲೆಯಾಗಿ ರೂಪುಗೊಂಡಿದೆ.

ಓದುಗರ ಅನಿಸಿಕೆ...

ನಮಗೆಲ್ಲಾ ಹೆಮ್ಮೆ ಹಾಗೂ ಸಂತಸ : ನಮ್ಮ ತುಮಕೂರಿನ ಸಿದ್ಧಗಂಗಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕು ಸಹಕಾರ ಕ್ಷೇತ್ರದಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು ಸದಸ್ಯರಿಗೆ ಶೇ.15ರಷ್ಟು ಡಿವಿಡೆಂಡ್ ಘೋಷಿಸಿದೆ. ಹಾಗೆಯೇ ರಿಜರ್ವ್ ಬ್ಯಾಂಕಿನಿಂದ "ವ್ಯವಹಾರ ದೃಢೀಕರಣಕ್ಕಾಗಿ ಅರ್ಹತಾ ಮಾನದಂಡ ಹೊಂದಲಾದ ಪಟ್ಟಣ ಸಹಕಾರ ಬ್ಯಾಂಕು" ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದು ನಮಗೆಲ್ಲಾ ಹೆಮ್ಮೆ ಸಂತಸ ಉಂಟುಮಾಡಿದೆ.

▶▶ ರೇಣುಕಾ ಪ್ರಸಾದ್ ಟಿ., ತುಮಕೂರು

ಉತ್ತಮ ಸೇವೆಯೇ ಕಾರಣ : ನಮ್ಮ ರಾಜ್ಯದ ಬಹುತೇಕ ಮಹಿಳಾ ಪಟ್ಟಣ ಸಹಕಾರ ಬ್ಯಾಂಕುಗಳು ವರ್ಷದಿಂದ ವರ್ಷಕ್ಕೆ ಉತ್ತಮ ಪ್ರಗತಿಯನ್ನು ಸಾಧಿಸುತ್ತಿರುವುದು ಮಾತ್ರವಲ್ಲ, ಸದಸ್ಯರಿಗೆ ಉತ್ತಮ ಲಾಭಾಂಶ ನೀಡುತ್ತಿವೆ. ಗ್ರಾಹಕರಿಗೆ ಉತ್ತಮ ಸೇವೆ, ದಕ್ಷ ಆಡಳಿತ, ನುರಿತ ಸಿಬ್ಬಂದಿ ಹಾಗೂ ಅಧ್ಯಕ್ಷರಾದವರಿಂದ ಸೂಕ್ತ ಮಾರ್ಗದರ್ಶನ, ಅವರಿಗೆ ಬೆಂಬಲವಾಗಿ ನಿಂತ ಆಡಳಿತ ಮಂಡಳಿ ಕಾರಣವಾಗಿರುತ್ತದೆ. ಇದು ಹೀಗೆಯೇ ಮುಂದುವರಿಯಲಿ.

▶▶ ವನಜಾಕ್ಷಿ ಹಿರೇಮಠ್, ರಾಣೆಬೆನ್ನೂರ್

ಸಂಪಾದಕರು :
ಪುಂಡಲೀಕ ಎನ್. ಕೇರೂರೆ,
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

ಇವರಿಗೆ,

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.